1030 (1619) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳೆಷ್ಟು: (ವಿವರ ಒದಗಿಸುವುದು);

ಆ) ಈ ಕೆರೆಗಳ ಜಮೀನು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2005-06ನೇ ಸಾಲಿನಲ್ಲಿ ಈ ಕೆರೆಗಳ ಅಭಿವೃದ್ಧಿಗಾಗಿ ಬಿಡುಗಡೆಯಾದ ಹಣವೆಷ್ಟು;

ಈ) ಸರ್ಕಾರ ಈ ಕೆರೆಗಳ ಅಭಿವೃದ್ಧಿಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಕೆಳಕಂಡ 6 ಕೆರೆಗಳಿವೆ. (1) ಬೆಲ್ಲತಸಾನೆ ಕೆರೆ (2) ಜೋತಿಗೋಡನಪುರ ಕಥಾನಾಯಕನ ಕೆರೆ (3) ಹೊಂಡರಬಾಳು ಕೆರೆ (4) ಕೆಂಪನಪುರ ಕೆರೆ (5) ಉಮ್ಮತ್ತೂರು ಕೆರೆ ಹಾಗೂ (6) ಹೊಂಗನೂರು ಹಿರೇಕೆರೆ.

ಆ) ಈ ಪೈಕಿ ಕೆಂಪನಪುರ ಕೆರೆ ಹಾಗೂ ಹೊಂಗನೂರು ಹಿರೇಕೆರೆಗಳಲ್ಲಿ ಜಮೀನು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) 2005-06ನೇ ಸಾಲಿನಲ್ಲಿ 2 ಕೆರೆಗಳ ಅಭಿವೃದ್ಧಿಗಾಗಿ ರೂ. 2.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಈ) ಅನುದಾನ ಲಭ್ಯತೆಯ ಮೇರೆಗೆ ಈ ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

1032 (1425) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಬಾರ್ಡ್ ನೆರವಿನಿಂದ ನಿರ್ಮಿಸಲಾಗಿರುವ ಅಭಿವೃದ್ಧಿ ಮತ್ತು ದುರಸ್ತಿ ಮಾಡಲಾಗಿರುವ ಕೆರೆಗಳ ಸಂಖ್ಯೆ ಎಷ್ಟು (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಕೆರೆವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಆ) ಇದಕ್ಕಾಗಿ ಮೇಲ್ಕಂಡ ಅವಧಿಯಲ್ಲಿ ಎಷ್ಟು ಹಣವನ್ನು ವೆಚ್ಚಮಾಡಲಾಗಿದೆ. ಈ ಯೋಜನೆಯನ್ನು ಕಾರ್ಯಗತ ಮಾಡುವಾಗ ಕಳಪೆ ಕಾಮಗಾರಿ ಮತ್ತು ಇತರೆ ದೂರುಗಳ ಬಗ್ಗೆ ಮನವಿಗಳು ಸರ್ಕಾರಕ್ಕೆ ಬಂದಿವೆಯೇ; ಹಾಗಿದ್ದಲ್ಲಿ ಅದರ ವಿವರಗಳೇನು;

ಇ) ಪ್ರಸಕ್ತ ಸಾಲಿನಲ್ಲಿ ನಬಾರ್ಡ್ ನೆರವಿನಿಂದ ಜಿಲ್ಲೆಯ ಯಾವ ಯಾವ ಗ್ರಾಮಗಳ ಕೆರೆಗಳನ್ನು ನಿರ್ಮಿಸಲಾಗುವುದು / ಅಭಿವೃದ್ಧಿ ಮತ್ತು ದುರಸ್ತಿ ಮಾಡಲಾಗುವುದು?

ಶ್ರೀ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) 2 ಕೆರೆಗಳನ್ನು ನಿರ್ಮಿಸಲಾಗಿದೆ. ವಿವರ ಕೆಳಗಿನಂತಿದೆ.

(ಲಕ್ಷ ರೂ. ಗಳಲ್ಲಿ)

ಕ್ರ. ಸಂ.	ಕೆರೆಯ ಹೆಸರು	ಮತಕ್ಷೇತ್ರ	ಅಂದಾಜು ಮೊತ್ತ	ಖರ್ಚಾದ ಮೊತ್ತ (03-04 ರಿಂದ 05-06 ವರೆಗೆ
1	ಸೈದಾಪುರ ಕೆರೆ	ಬಸವಕಲ್ಯಾಣ	550.00	129.00
2	ಕಾರಿಗೊಂಡಾ ಥಾಂಡಾ ಇಂಗು ಕೆರೆ	ಬಸವಕಲ್ಯಾಣ	30.00	28.85
	ಒಟ್ಟು		580.00	157.85

ಆ) ಕಳಪೆ ಕಾಮಗಾರಿ ಕುರಿತು ಯಾವುದೇ ದೂರುಗಳು ಬಂದಿಲ್ಲ. ಇತರೆ ದೂರುಗಳು ಬಂದಿದ್ದು, ಆ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಈಗಾಗಲೇ ನಬಾರ್ಡ್ ಸಾಲ ಸೌಲಭ್ಯದಿಂದ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲದೆ 2006–07ನೇ ಸಾಲಿನಲ್ಲಿ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದೆ.

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ
ಬೀದರ್ ಜಿಲ್ಲೆ :		
1	ಬಸವಕಲ್ಯಾಣ ತಾ: ಹಂದ್ರಯಾಳ ಇಂಗುಕೆರೆ ನಿರ್ಮಾಣ	29.00
2	ಬಸವಕಲ್ಯಾಣ ತಾ: ಹಿರಣಗಾಂವ ಇಂಗುಕೆರೆ ನಿರ್ಮಾಣ	29.00
3	ಔರಾದ್ ತಾ: ಕೌಡಗಾಂವ್ ಮಡವಾಳ್ ಹತ್ತಿರ ಹೊಸಕೆರೆ ನಿರ್ಮಾಣ	143.00
4	ಔರಾದ್ ತಾ: ಅಕಣಾಪುರ ಹತ್ತಿರ ಇಂಗುಕೆರೆ ನಿರ್ಮಾಣ	126.00
5	ಬೀದರ್ ತಾ: ಮನಹಳ್ಳಿ ಇಂಗುಕೆರೆ ನಿರ್ಮಾಣ	28.50
6	ಬೀದರ್ ತಾ: ಆಯಾಸಪುರ ಇಂಗುಕೆರೆ ನಿರ್ಮಾಣ	29.85
7	ಹುಮನಾಬಾದ್ ತಾ: ಜಲಸಂಗಿ ಗ್ರಾಮದ–IIನೇ ಇಂಗುಕೆರೆ ನಿರ್ಮಾಣ	30.00
8	ಭಾಲ್ಕಿ ತಾ: ತೇಗಂಪುರ ಗ್ರಾಮದ ಸೈಟ್–I ಇಂಗುಕೆರೆ ನಿರ್ಮಾಣ	30.00
9	ಹುಮನಾಬಾದ ತಾ: ಹಂದಿಕೆರೆ ಕೆರೆ ಅಭಿವೃದ್ಧಿ	28.85

10 ಹುಮನಾಬಾದ್ ತಾ: ಹುಣಸ್ಯಾಳ ಹತ್ತಿರ ಇಂಗುಕೆರೆ ಅಭಿವೃದ್ಧಿ 15.50

1033 (1523) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಪ್ರಸಕ್ತ ಸಾಲಿನ ಆಯವ್ಯಯದ ಮಂಡನೆಯ ಬಳಿಕ ರಾಜ್ಯದ ಹಣಕಾಸಿನ ಬಳಿಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಆಶಾದಾಯಕವಾಗಿದೆಯೇ;

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಇ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ವಿತ್ತೀಯ ಕೊರತೆಯನ್ನು ಸರಿದೂಗಿಸಲು ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ?

ಈ) ಪ್ರಸಕ್ತ ಸಾಲಿನ ಸಂಪನ್ಮೂಲ ಕ್ರೋಢೀಕರಣದ ವಿವರಗಳೇನು?

ಉ) ಪ್ರಸಕ್ತ ಸಾಲಿನಲ್ಲಿ ವಾಣಿಜ್ಯ ತೆರಿಗೆ, ಅಬ್ಕಾರಿ ತೆರಿಗೆ, ಸಾರಿಗೆ ಸ್ಟಾಂಪುಗಳ ನೋಂದಣಿ ಇಲಾಖೆಯಿಂದ ಎಷ್ಟು ತೆರಿಗೆ ಆದಾಯವನ್ನು ನಿರೀಕ್ಷಿಸಲಾಗಿದೆ?

ಊ) ಕಳೆದ ಸಾಲಿನಲ್ಲಿ ಮೇಲ್ಕಂಡ ಇಲಾಖೆಗಳಿಂದ ಎಷ್ಟು ತೆರಿಗೆ ಆದಾಯದ ಶೇಕಡಾವಾರು ಗುರಿ ಹೊಂದಲಾಗಿತ್ತು ಇದರಲ್ಲಿ ಎಷ್ಟು ಶೇಕಡಾವಾರು ಗುರಿ ಸಾಧನೆ ಮಾಡಲಾಯಿತು? (ಪ್ರತಿಯೊಂದು ಇಲಾಖೆಯ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು)

ಋ) ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ಈವರೆವಿಗೆ ಕೇಂದ್ರದಿಂದ ವಿವಿಧ ಯೋಜನೆಗಳಿಗಾಗಿ ಬಂದಿರುವ ಹಣವೆಷ್ಟು?

ಎ) ಇದನ್ನು ಹೊರತುಪಡಿಸಿದಂತೆ ರಾಜ್ಯ ಸರ್ಕಾರವು ಆರ್.ಬಿ.ಐ.ನಿಂದ ಓವರ್ ಡ್ರಾಫ್ಟ್ ಸೌಲಭ್ಯವನ್ನಾಗಲಿ ಅಥವಾ ವಿಮೆ ಕಂಪನಿಗಳಿಂದ ಅಥವಾ ಕೇಂದ್ರ ಅಥವಾ ರಾಜ್ಯದ ವಿವಿಧ ಸಂಸ್ಥೆಗಳಿಂದ ಸಾಲವನ್ನೇನಾದರೂ ಪಡೆದುಕೊಂಡಿದೆಯೇ ಅಥವಾ ಸಾಲಕ್ಕಾಗಿ ಪ್ರಸ್ತಾವನೆ ಸಲ್ಲಿಸಿದೆಯೇ; ಇದ್ದಲ್ಲಿ ವಿವರಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯದ ಹಣಕಾಸು ಪರಿಸ್ಥಿತಿ ತೃಪ್ತಿಕರವಾಗಿದೆ.

ಆ) ಆಯವ್ಯಯದಲ್ಲಿ ಸಂಪನ್ಮೂಲ ಮತ್ತು ವೆಚ್ಚಗಳಿಗಾಗಿ ಮಾಡಲಾದ ಪ್ರಕ್ಷೇಪಣಗಳು (projections) ಸರಿಯಾದ ಹಾದಿಯಲ್ಲಿದೆ ಮತ್ತು ಆಯವ್ಯಯದಲ್ಲಿ ಅಂದಾಜು ಮಾಡಲಾದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನಿರೀಕ್ಷೆಯಿದೆ.

ಇ) ಸರ್ಕಾರವು ವಿತ್ತೀಯ ಸುಧಾರಣೆ ಅಧಿನಿಯಮವನ್ನು ಜಾರಿಗೆ ತಂದಿರುತ್ತದೆ. ಅಂದಾಜಿಸಲಾದ ವಿತ್ತೀಯ ಕೊರತೆಯಾದ 5210.57 ಕೋಟಿ ರೂಪಾಯಿಗಳು ಜಿಎಸ್‌ಡಿಪಿಯ ಶೇಕಡ 2.82ರಷ್ಟಿರುತ್ತದೆ. ಸರ್ಕಾರದ ಸಾಲ ಪಡೆಯುವ ಕಾರ್ಯಕ್ರಮವು ಸಾಲದ ಲಭ್ಯತೆಗಿಂತ ಹೆಚ್ಚಾಗಿ ಸಾಲ ಮರುಪಾವತಿ ಸಾಮರ್ಥ್ಯವನ್ನು ಆಧರಿಸಿದೆ. ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲ